# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಇಂಜಿನಿಯರ್ ರವರ ಕಛೇರಿ, ವಾರ್ಡ್ ಸಂಖ್ಯೆ: 114 ಅಗರಂ ವಾರ್ಡಿನಲ್ಲಿ ದಿನಾಂಕ: 19-10-2020 ರಂದು ನಡೆದ ಸಭೆಯ ನಡಾವಳಿಗಳು**

ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)ಪಿಆರ್/35/2020-21, ದಿನಾಂಕ: 21-09-2020 ರ ಆದೇಶದಂತೆ ದಿನಾಂಕ: 07-11-2020 ರಂದು ವಾರ್ಡ್ ಸಂಖ್ಯೆ: 114 ಅಗರಂ ವಾರ್ಡ್‌ನಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು.

**ಸಭೆಗೆ ಹಾಜರಿದ್ದವರ ವಿವರಗಳು**

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಶ್ರೀ. ಅವಿನಾಶ್ ಬಾಬು | ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2 | ಶ್ರೀ. ಅಪ್ಪುರಾಜ್ | ಸಹಾಯಕ ಕಾರ್ಯಪಾಲಕ ಅಭಿಯಂತರರ, ಘನತ್ಯಾಜ್ಯ ನಿರ್ವಹಣೆ ಶಾಂತಿನಗರ ವಿಭಾಗ |
| 3 | ಶ್ರೀ ಚಂದ್ರಪ್ಪ ಕೆ ಬಿ | ಸಹಾಯಕ ಕಂದಾಯ ಅಧಿಕಾರಿಗಳು, ದೊಮ್ಮಲೂರು ಉಪ ವಿಭಾಗ |
| 4 | ಶ್ರೀ ಟಿ.ಎಸ್. ನಾಗಪ್ಪ | ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ |
| 5 | ಶ್ರೀ ಸುರೇಶ್ | ಕಂದಾಯ ಪರಿವೀಕ್ಷಕರು ವಾರ್ಡ್ ಸಂಖ್ಯೆ: 114 |
| 6 | ಶ್ರೀ ಕೆ ಎಸ್ ಚಿದಾನಂದ | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ಸಂಖ್ಯೆ: 114 |
| 7 | ಶ್ರೀಮತಿ. ಶೈಲಜ ಬಿ | ಸಹಾಯಕ ಕಂದಾಯ ಅಧಿಕಾರಿಗಳು (ಕಲ್ಯಾಣ) |
| 8 | ಶ್ರೀ. ಬಿ.ಸಿ. ಪ್ರಭು | ಕೆಲಸ ಪರಿವೀಕ್ಷಕರು, ವಾರ್ಡ್ ಸಂಖ್ಯೆ: 114 |
| 9 | ಶ್ರೀ. ಎಲ್. ಸಗಾಯನಾಥನ್ | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ಸಂಖ್ಯೆ: 114 |
| 10 | ಡಾ॥ ಚಿತ್ರ | ಆರೋಗ್ಯಾಧಿಕಾರಿಗಳು |
| 11 | ಶ್ರೀ. ಆರ್. ಸುರೇಶ್ | ಕಂದಾಯ ಪರಿವೀಕ್ಷಕರು ವಾರ್ಡ್ ಸಂಖ್ಯೆ: 114 |
| 12 | ಶ್ರೀಮತಿ. ಶ್ರೀಮತಿ. ಎಂ.ಸಿ | ಟೈಲರಿಂಗ್ ಇನ್ಸ್ಟ್ರಕ್ಟರ್ ವಾರ್ಡ್ ಸಂಖ್ಯೆ: 114 |
| 13 | ಶ್ರೀ. ಡಿ. ಮೂರ್ತಿ | ಕಾರ್ಯದರ್ಶಿಗಳು ಮತ್ತು ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ: 114 |
| **ವಾರ್ಡ್ ಸಮಿತಿ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು** | | |
| 10 | ಶ್ರೀ. ಆರ್. ನಂದಕುಮಾರ್ | ಅಗರಂ ವಾರ್ಡಿನ ನಾಗರೀಕರು |
| 11 | ಪರುಷೋತ್ತಮ್ | ಅಗರಂ ವಾರ್ಡಿನ ನಾಗರೀಕರು |
| 12 | ರಾಜುಕುಟ್ಟಿ | ಅಗರಂ ವಾರ್ಡಿನ ನಾಗರೀಕರು |
| 13 | ನರಸಿಂಹಮೂರ್ತಿ ವಿ ಜಿ | ಅಗರಂ ವಾರ್ಡಿನ ನಾಗರೀಕರು |
| 14 | ಭವಾನಿ | ಅಗರಂ ವಾರ್ಡಿನ ನಾಗರೀಕರು |

ದಿನಾಂಕ: 07-11-2020 ರಂದು ಮಧ್ಯಾಹ್ನ 2-00 ಗಂಟೆಗೆ ವಾರ್ಡ್ ಸಂಖ್ಯೆ: 114 ಅಗರಂ ವಾರ್ಡ್ ವ್ಯಾಪ್ತಿಯ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಸಂಖ್ಯೆ: 114 ಅಗರಂ ವ್ಯಾಪ್ತಿಯ ಓ.ಆರ್.ಸಿ. ರಸ್ತೆಯಲ್ಲಿರುವ ಬಿಬಿಎಂಪಿ ಬಾಲಕಿಯರ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿತ್ತು.

ಸಭೆಯ ಆರಂಭದಲ್ಲಿ ನೋಡಲ್ ಅಧಿಕಾರಿಯವರನ್ನು ಹಾಗೂ ಸಭೆಗೆ ಹಾಜರಾಗಿದ್ದ ಸದಸ್ಯರನ್ನು/ ಸಾರ್ವಜನಿಕರನ್ನು ಹಾಗೂ ಇತರೆ ಇಲಾಖೆಗಳಿಂದ ಆಗಮಿಸಿದ್ದ ಅಧಿಕಾರಿಗಳಿಗೆ ಸಮಿತಿಯ ಕಾರ್ಯದರ್ಶಿಯವರು ಸ್ವಾಗತವನ್ನು ಕೋರಿದರು.

ಸಭೆಯ ಪ್ರಾರಂಭದಲ್ಲಿ ಹಿಂದಿನ ಸಭೆಯ ನಡಾವಳಿಗಳನ್ನು ಓದಲಾಯಿತು. ಮತ್ತು ಸಾರ್ವಜನಿಕರ ಸಮಸ್ಯೆಗಳನ್ನು ಆದಷ್ಟು ಬಗೆಹರಿಸಿರುವ ಬಗ್ಗೆ ತಿಳಿಸಲಾಯಿತು. ಮತ್ತು ಕೆಲವೊಂದು ಸಮಸ್ಯೆಗಳ ಪರಿಹಾರ ಕಾರ್ಯವು ಪ್ರಗತಿಯಲ್ಲಿರುವುದನ್ನು ಸಾರ್ವಜನಿಕರ ಗಮನಕ್ಕೆ ತರಲಾಯಿತು.

ಇಂದು ನಡೆದ ಸಭೆಯಲ್ಲಿ ಪ್ರಮುಖವಾಗಿ ಕೆಳಕಂಡ ವಿಷಯಗಳನ್ನು ಚರ್ಚಿಸಲಾಯಿತು.

| ಕ್ರ.ಸಂ | ಚರ್ಚಿಸಿದ ವಿಷಯಗಳು | ತೆಗೆದುಕೊಂಡ ಕ್ರಮಗಳು |
|---|---|---|
| 1 | ಸಭೆಯಲ್ಲಿ ಹಾಜರಿದ್ದಂತಹ ಭವಾನಿ ರವರು ಘನತ್ಯಾಜ್ಯ ನಿರ್ವಹಣೆಯ ಬಗ್ಗೆ ವಿವರಣೆ ಕೇಳಿರುತ್ತಾರೆ. | ಸಭೆಯಲ್ಲಿ ಹಾಜರಿದ್ದ ಘನತ್ಯಾಜ್ಯ ನಿರ್ವಹಣೆ ವಿಭಾಗದ ಕಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀ. ಕೆ.ಎಸ್. ಚಿದಾನಂದ್ ರವರು ಮಾತನಾಡಿ ಪ್ರಸ್ತುತ ವಾರ್ಡಿನಲ್ಲಿ ಯಾವುದೇ ಕಸದ ಸಮಸ್ಯೆ ಇಲ್ಲವೆಂದು, ಹಾಗೂ ಸಾರ್ವಜನಿಕರಿಂದ ಬರುವಂತಹ ದೂರುಗಳನ್ನು ಆಗಿಂದಾಗ್ಗೆ ಪರಿಹರಿಸುತ್ತಿರುವುದಾಗಿ ಮತ್ತು ಇನ್ನು ಮುಂದೆಯು ವಾರ್ಡಿನಲ್ಲಿ ಕಸದ ಸಮಸ್ಯೆ ಉಂಟಾಗದಂತೆ ಕಾರ್ಯನಿರ್ವಹಿಸಲಾಗುವುದೆಂದು ಸಭೆಗೆ ತಿಳಿಸಿದರು. |
| 2 | ಶ್ರೀ. ನಂದಕುಮಾರ್ ರವರು ಮತ್ತೆ ಸಭೆಯಲ್ಲಿ ಮಾತನಾಡಿ, ಅಯ್ಯಪ್ಪ ದೇವಸ್ಥಾನ ಬ್ಲಾಕ್‌ನಲ್ಲಿ ಬಿ.ಡಬ್ಲ್ಯು.ಎಸ್.ಎಸ್.ಬಿ. ಯಿಂದ ಕಲುಷಿತ ನೀರು ಸರಬರಾಜು ಆಗುತ್ತಿದ್ದು, ಇದರಿಂದ ಇಲ್ಲಿನ ನಿವಾಸಿಗಳು ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆಂದು ಕೂಡಲೇ ಈ ಸಮಸ್ಯೆಯನ್ನು ಪರಿಹರಿಸಿಕೊಡಬೇಕೆಂದು ಕೋರಿದರು. | ಈ ಕುರಿತು ನೋಡಲ್ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದ, ಬಿ.ಡಬ್ಲ್ಯು.ಎಸ್.ಎಸ್.ಬಿ. ಇಲಾಖೆಯ ಶ್ರೀ ರಂಗಯ್ಯ ಸಹಾಯಕ ಇಂಜಿನಿಯರ್ ರವರು ಮಾತನಾಡಿ ಮುಂದಿನ 7 ದಿನಗಳಲ್ಲಿ ಸಮಸ್ಯೆ ಪರಿಹರಿಸಲಾಗುವುದು ಎಂದು ಸಭೆಗೆ ತಿಳಿಸಿದರು. |
| 3 | ಸಭೆಯಲ್ಲಿ ಹಾಜರಿದ್ದ ಅಗರಂ ವಾರ್ಡಿನ ನಿವಾಸಿಯಾದ ಶ್ರೀ. ರಾಜಕುಟ್ಟಿ ರವರು ಮಾತನಾಡಿ ವಾರ್ಡಿನಲ್ಲಿರುವ ಎಲ್ಲಾ ರಸ್ತೆ ಬದಿಯ ಚರಂಡಿಗಳಲ್ಲಿ, ಪ್ರಮುಖವಾಗಿ ಕೆ.ಬಿ.ಎ.ಆರ್. ರಸ್ತೆ, ಸೌತ್ ರಸ್ತೆ, ಸ್ಟ್ಯಾನ್ಲೀ ರಸ್ತೆ ಬದಿಗಳ ಚರಂಡಿಗಳಲ್ಲಿ ಹೂಳು ತುಂಬಿಕೊಂಡಿದ್ದು, ಇದರಿಂದ ಮಳೆ ಬಂದ ಸಂದರ್ಭದಲ್ಲಿ ಮಳೆ ನೀರಿನಿಂದ ಬಹಳ ತೊಂದರೆಯಾಗುತ್ತಿರುವುದಾಗಿ ತಿಳಿಸಿ, ಈ ಚರಂಡಿಗಳಲ್ಲಿರುವ ಹೂಳನ್ನು ತೆರವುಗೊಳಿಸಲು ಕೋರಿರುತ್ತಾರೆ. ಹಾಗೂ ಜಸ್ಮಾ ಭವನದ ಹತ್ತಿರ ಕಲ್ವರ್ಟ್ ಕಾಮಗಾರಿ ಪೂರ್ಣಗೊಳಿಸುವಂತೆ ಕೋರಿರುತ್ತಾರೆ | ಈ ಸಮಸ್ಯೆ ಕುರಿತು ವಾರ್ಡಿನ ಸಹಾಯಕ ಇಂಜಿನಿಯರ್ ರವರು ಮಾತನಾಡಿ ಈಗಾಗಲೇ ವಾರ್ಡಿನಲ್ಲಿರುವ ಎಲ್ಲಾ ಚರಂಡಿಗಳ ಹೂಳನ್ನು ತೆಗೆಯುವ ಕಾಮಗಾರಿ ನಿರ್ವಹಿಸುತ್ತಿದ್ದು, ಆದಷ್ಟು ಬೇಗ ಎಲ್ಲಾ ಚರಂಡಿಗಳಲ್ಲಿಯು ಹೂಳನ್ನು ತೆಗೆಯಲಾಗುವುದೆಂದು ಸಭೆಗೆ ತಿಳಿಸಿದರು.<br>ಜಸ್ಮಾ ಭವನದ ಹತ್ತಿರ ಕಲ್ವರ್ಟ್ ಕಾಮಗಾರಿ ಈಗಾಗಲೇ ಪೂರ್ಣಗೊಳಿಸಿ ಸಾರ್ವಜನಿಕರ ಓಡಾಟಕ್ಕೆ ಅನುವುಮಾಡಲಾಗಿದೆ ಎಂದು ಸಹಾಯಕ ಇಂಜಿನಿಯರ್ ಸಭೆಗೆ ಮಾಹಿತಿ ನೀಡಿದರು. |

| | | |
|---|---|---|
| 4 | ಶ್ರೀ. ನಂದಕುಮಾರ್ ರವರು ಮಾತನಾಡಿ ಅಗರಂ ವಾರ್ಡಿನ ಚಾನಲ್ ರಸ್ತೆಯು ಬಹಳಷ್ಟು ಹದಗೆಟ್ಟಿದ್ದು, ಇದರಿಂದ ವಾಹನ ಸವಾರರಿಗೆ ಬಹಳ ತೊಂದರೆಯಾಗುತ್ತಿರುವುದಾಗಿ ತಿಳಿಸಿ, ಕೂಡಲೇ ರಸ್ತೆಗೆ ಡಾಂಬರೀಕರಣ ಮಾಡಲು ಕೋರಿದರು. | ಈ ಸಮಸ್ಯೆ ಕುರಿತು ವಾರ್ಡಿನ ಸಹಾಯಕ ಇಂಜಿನಿಯರ್ ರವರು ಮಾತನಾಡಿ ಈಗಾಗಲೇ ಚಾನಲ್ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದ್ದು, ಈಗಾಗಲೇ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಮಳೆಗಾಲವದ್ದರಿಂದ ಕಾಮಗಾರಿಯು ವಿಳಂಭವಾಗುತ್ತಿರುತ್ತದೆ. ಕೂಡಲೇ ಚಾನಲ್ ರಸ್ತೆಯ ಅಭೀವೃದ್ಧಿ ಕಾಮಗಾರಿಯನ್ನು ಪೂರ್ಣಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲಾಗುವುದೆಂದು ಸಭೆಗೆ ತಿಳಿಸಿದರು. |
| 5 | ಅಗರಂ ವಾರ್ಡ್ ವ್ಯಾಪ್ತಿಯ 6ನೇ ಸ್ಕ್ವೇರ್ ಬಳಿ ಇರುವ ಮರದ ಬೇರಿನಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಇದನ್ನು ತೆರವುಗೊಳಿಸಲು ಶ್ರೀ ರಾಜಕುಟ್ಟಿ ರವರು ಕೋರಿರುತ್ತಾರೆ. | ನೋಡಲ್ ಅಧಿಕಾರಿಗಳು ಮತನಾಡಿ ಈ ಸಮಸ್ಯೆಯು ಪಾಲಿಕೆಯ ಅರಣ್ಯ ಇಲಾಖೆಯವರು ಸರಿಪಡಿಸಬೇಕಿದ್ದು, ಕೂಡಲೇ ಸಂಪರ್ಕಿಸಿ ಸಮಸ್ಯೆಯನ್ನು ಬಗೆಹರಿಸುವುದಾಗಿ ತಿಳಿಸಿದರು. ಹಾಗೂ ಮುಂದಿನ ವಾರ್ಡ್ ಸಮಿತಿ ಸಭೆಗೆ ಅರಣ್ಯ ಇಲಾಖೆಯ ಅಧಿಕಾರಿಗಳನ್ನು ಹಾಜರಾಗುವಂತೆ ಸೂಚಿಸಿದರು. |
| 6 | ಶ್ರೀಮತಿ. ಭವಾನಿ ರವರು ಮಾತನಾಡಿ 5 ಮತ್ತು 6ನೇ ಸ್ಕ್ವೇರ್‌ನಲ್ಲಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೀದಿ ದೀಪಗಳಿರುವುದಿಲ್ಲ. ಇದರಿಂದಾಗಿ ಇಲ್ಲಿನ ನಿವಾಸಿಗಳಿಗೆ ಬಹಳ ತೊಂದರೆಯಾಗುತ್ತಿರುವುದಾಗಿ ತಿಳಿಸಿ, ಬೀದಿ ದೀಪಗಳನ್ನು ಅಳವಡಿಸಲು ಕೋರಿರುತ್ತಾರೆ. | ಈ ಸಮಸ್ಯೆ ಕುರಿತು ಪಾಲಿಕೆಯ ವಿದ್ಯುತ್ ಇಲಾಖೆಯ ಸಹಾಯಕ ಇಂಜಿನಿಯರ್ ಆದ ಶ್ರೀ. ಮಂಜಪ್ಪ ರವರು ಮಾತನಾಡಿ, ಈಗಾಗಲೇ ಸಮಸ್ಯೆಯನ್ನು ಸರಿಪಡಿಸಲಾಗಿದೆ ಎಂದು ಸಭೆಗೆ ತಿಳಿಸಿದರು. |
| 7 | ಶ್ರೀಮತಿ. ಭವಾನಿ ರವರು ತಮ್ಮ ಮಾತನ್ನು ಮುಂದುವರೆಸುತ್ತಾ, ರಾಜ್‌ಗೋಪಾಲ್ ಮೊದಲಿಯಾರ್ ರಸ್ತೆಯು ಬಹಳಷ್ಟು ಹದಗೆಟ್ಟಿದ್ದು, ಇದರಿಂದ ವಾಹನ ಸವಾರರು ಬಹಳ ತೊಂದರೆ ಅನುಭವಿಸುವಂತಾಗಿದೆ. ಆದ್ದರಿಂದ ಕೂಡಲೇ ರಸ್ತೆಯನ್ನು ದುರಸ್ಥಿ ಮಾಡಿಕೊಡಬೇಕೆಂದು ಕೋರಿದರು. | ರಾಜ್‌ಗೋಪಾಲ್ ಮೊದಲಿಯಾರ್ ರಸ್ತೆ ಅಭಿವೃದ್ಧಿಪಡಿಸುವ ಕಾಮಗಾರಿಯು ಟೆಂಡರ್ ಹಂತದಲ್ಲಿದ್ದು, ಟೆಂಡರ್ ಪ್ರಕ್ರಿಯೇ ಮುಗಿದ ಕೂಡಲೇ ಕಾಮಗಾರಿ ಕೈಗೊಳ್ಳಲಾಗುವುದು ಎಂದು ವಾರ್ಡಿನ ಸಹಾಯಕ ಇಂಜಿನಿಯರ್ ರವರು ಸಭೆಗೆ ಮಾಹಿತಿ ನೀಡಿದರು. |
| 8 | ಮಾನ್ಯ ಅಧ್ಯಕ್ಷರು ಮಾತನಾಡಿ ವಾರ್ಡ್ ವ್ಯಾಪ್ತಿಯ ರಸ್ತೆಗಳ ಬದಿಯಲ್ಲಿ ಫುಟ್‌ಪಾತ್‌ಗಳಲ್ಲಿ ಅನಧಿಕೃತವಾಗಿ ವಾಹನಗಳನ್ನು ನಿಲುಗಡೆ ಮಾಡಿದ್ದು, ಪ್ರಮುಖವಾಗಿ ಕೆ.ಜಿ.ಎ.ಆರ್. ರಸ್ತೆ ಮತ್ತು ಚಾನಲ್ ರಸ್ತೆಗಳಲ್ಲಿ ಈ ಸಮಸ್ಯೆ ಹೆಚ್ಚಾಗಿ ಕಂಡುಬಂದಿರುತ್ತದೆ ಎಂದು ತಿಳಿಸಿದರು ಈ ಸಮಯದಲ್ಲಿ ಮತ್ತೆ ಶ್ರೀಮತಿ. ಭವಾನಿ ರವರು ಮಾತನಾಡಿ ಜಾನ್ ಬುಲ್ ಸ್ಟ್ರೀಟ್‌ನಲ್ಲಿಯೂ ಇದೇ ಸಮಸ್ಯೆ ಇದೆ ಎಂದು ತಿಳಿಸಿದರು. ಈ ಕುರಿತು ಸಂಚಾರಿ ಪೊಲೀಸರು ಕೂಡಲೆ ಕ್ರಮಕೈಗೊಳ್ಳಬೇಕೆಂದು ಮಾನ್ಯ ಅಧ್ಯಕ್ಷಕರು ತಿಳಿಸಿದರು. | ಈ ಸಮಸ್ಯೆ ಕುರಿತು ಟ್ರಾಫಿಕ್ ಪೋಲೀಸ್ ರವರಿಗೆ ಪತ್ರ ಮುಖೇನ ವಿಷಯ ತಿಳಿಸಿ, ಕೂಡಲೇ ಕ್ರಮಕೈಗೊಳ್ಳಲಾಗುವುದೆಂದು ನೋಡಲ್ ಅಧಿಕಾರಿಗಳು ಸಭೆಗೆ ತಿಳಿಸಿದರು. |
| 9 | ಶ್ರೀ. ಪುರುಷೋತ್ತಮ ರವರು ಮಾತನಾಡಿ ಆಸ್ಟಿನ್‌ಟೌನ್ ಯರ್ರಪ್ಪ ಗಾರ್ಡನ್ ಪ್ರದೇಶದಲ್ಲಿ ನೀರಿನ ಸಮಸ್ಯೆ ಹೆಚ್ಚಾಗಿದ್ದು, ಇದರಿಂದ ನೀರು ಸರಬರಾಜು ಮಾಡುವ ಸಮಯವನ್ನು 15 ರಿಂದ 20 ನಿಮಿಷ ಹೆಚ್ಚಿಸಬೇಕೆಂದು ಕೋರಿದರು. | ಈ ಸಮಸ್ಯೆ ಕುರಿತು ಮಾತನಾಡಿದ ಬಿ.ಡಬ್ಲ್ಯು.ಎಸ್.ಎಸ್. ಸಿಬ್ಬಂಧಿಗಳು ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ ಸಮಸ್ಯೆ ಬಗೆಹರಿಸಲು ಅಗತ್ಯ ಕ್ರಮಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು. |

| | | |
|---|---|---|
| 10 | ಶ್ರೀ. ರಾಜಕುಟ್ಟಿ ರವರು ಮಾತನಾಡಿ ವಾರ್ಡಿನಲ್ಲಿ ಬಹಳಷ್ಟು ಮರಗಳ ಕೊಂಬೆಗಳನ್ನು ಕತ್ತರಿಸಬೇಕಾಗಿರುತ್ತದೆ. ಇದರಿಂದ ಬೀದಿ ದೀಪಗಳ ಬೆಳಕು ರಸ್ತೆಯ ಮೇಲೆ ಬೀಳದೇ ಇರುವುದರಿಂದ ಬೀದಿ ದೀಪಗಳು ಇದ್ದು ಇಲ್ಲದಂತಾಗಿರುತ್ತದೆ ಎಂದು ತಿಳಿಸಿದರು. | ನೋಡಲ್ ಅಧಿಕಾರಿಗಳು ಮಾತನಾಡಿ ಈ ಸಮಸ್ಯೆಯನ್ನು ಪಾಲಿಕೆಯ ಅರಣ್ಯ ವಿಭಾಗದಿಂದ ಪರಿಹರಿಸಬೇಕಾಗಿದ್ದು, ಕೂಡಲೇ ಅವರಿಗೆ ತಿಳಿಸಿ ಕ್ರಮಕೈಗೊಳ್ಳಲಾಗುವುದು ಎಂದು ಹೇಳಿದರು. ಹಾಗೂ ಮುಂದಿನ ಸಭೆಗೆ ಅವರನ್ನು ಹಾಜರಾಗಲು ಪತ್ರ ಬರೆಯುವಂತೆ ಕಾರ್ಯದರ್ಶಿಯವರಿಗೆ ಸೂಚಿಸಿದರು. |
| 11 | ಶ್ರೀ. ಪುರುಷೋತ್ತಮ ರವರು ಮಾತನಾಡಿ, ವಾರ್ಡಿ ರಸ್ತೆಗಳಲ್ಲಿ ರಸ್ತೆಗುಂಡಿಗಳು ಹೆಚ್ಚಾಗಿದ್ದು, ವಾಹನ ಸವಾರರಿಗೆ ಮತ್ತು ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಿರುತ್ತದೆ ಎಂದು ತಿಳಿಸಿದರು. | ಈ ಕುರಿತು ಮಾತನಾಡಿದ ವಾರ್ಡಿನ ಸಹಾಯಕ ಇಂಜಿನಿಯರ್ ರವರು ಈಗಾಗಲೇ ವಾರ್ಡಿನಲ್ಲಿ ರಸ್ತೆ ಗುಂಡಿಗಳನ್ನು ಗುರುತಿಸಿ ಮುಚ್ಚುವ ಕಾರ್ಯ ಪ್ರಗತಿಯಲ್ಲಿದೆ ಎಂದು ತಿಳಿಸಿದರು. |

ಸಮಿತಿಯ ಕಾರ್ಯದರ್ಶಿಯವರು ಸಭೆಗೆ ಹಾಜರಾಗಿದ್ದ ಸಮಿತಿಯ ಸದಸ್ಯರನ್ನು ಹಾಗೂ ಸಾರ್ವಜನಿಕರಿಗೆ ವಂದಿಸಿ ಅಧ್ಯಕ್ಷರ/ನೋಡಲ್ ಅಧಿಕಾರಿಗಳ ಅಪ್ಪಣೆಯ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಕಾರ್ಯದರ್ಶಿ ಮತ್ತು ಸಹಾಯಕ ಅಭಿಯಂತರರು**
**ವಾರ್ಡ್ ಸಂಖ್ಯೆ: 114 ಅಗರಂ**
**ಬಿ.ಬಿ.ಎಂ.ಪಿ**

**ನೋಡಲ್ ಅಧಿಕಾರಿಗಳು**
**ವಾರ್ಡ್ ಸಂಖ್ಯೆ: 114 ಅಗರಂ**
**ಬಿ.ಬಿ.ಎಂ.ಪಿ**

<u>ಪ್ರತಿಯನ್ನು:</u>

1. ಮಾನ್ಯ ಆಡಳಿತಗಾರರು, ಬಿಬಿಎಂಪಿ ರವರ ಅಮೂಲ್ಯ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅಮೂಲ್ಯ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
3. ವಿಶೇಷ ಆಯುಕ್ತರು (ಆಡಳಿತ) ರವರ ಅಮೂಲ್ಯ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ಪೂರ್ವ) ರವರ ಅಮೂಲ್ಯ ಅವಗಾಹನೆಗೆ ಸಲ್ಲಿಸಿದೆ.
5. ಮಾನ್ಯ ಮುಖ್ಯ ಅಭಿಯಂತರರು (ಪೂರ್ವ) ರವರ ಅಮೂಲ್ಯ ಅವಗಾಹನೆಗಾಗಿ ಸಲ್ಲಿಸಿದೆ.
6. ವಾರ್ಡ್ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
7. ಕಛೇರಿ ಪ್ರತಿ.